ಓ.ಎಸ್.ನಂಃ 12/2021

**ಪಿಡಬ್ಲ್ಯೂ–1**

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 04.07.2025 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು: 8ನೇ ಪ್ರತಿವಾದಿ ಪರ ಶ್ರೀ ಸಿ.ಎಂ.ಜಿ. ವಕೀಲರಿಂದಃ</u>**

ನಾನು ಎಸ್.ಎಸ್.ಎಲ್.ಸಿ ವರೆಗೆ ಓದಿದ್ದೇನೆ. ನಾನು ತರಕಾರಿ ವ್ಯಾಪಾರವನ್ನು ಈ ಹಿಂದೆ ಮಾಡುತ್ತಿದ್ದೆ. ಮೈಸೂರು ಜಿಲ್ಲಾಧಿಕಾರಿಗಳರವರ ಅದೇಶ ಸಂಖ್ಯೆಃ ಮು.ನಿ.ಸಿ(2) ಪಿ.ಆರ್. 27–92/93 ದಿಃ 17.09.1992 ಹಾಗೂ ಪುರಸಭೆ ಕೌನ್ಸಿಲ್ ನಿರ್ಣಯದ ದಿಃ 30.09.1992 ರಂತೆ ನಿಪಿ–1 ನ್ನು ನೀಡಲಾಗಿದೆ ಎಂದರೆ ಸರಿ. ದಿಃ 27.11.1994 ರಲ್ಲಿ ಮಾನ್ಯ ಮೈಸೂರು ಜಿಲ್ಲಾಧಿಕಾರಿಗಳರವರು ಹಕ್ಕು ಪತ್ರವನ್ನು 8ನೇ ಪ್ರತಿವಾದಿಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಅರೀಫ್ ಉಲ್ಲಾರವರಿಗೆ ದಾವ ಸ್ವತ್ತಿನ ಹಕ್ಕು ಪತ್ರ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–1 ನ್ನು ವಿತರಿಸುವ 7 ವರ್ಷ 10 ತಿಂಗಳ ಮೋದಲೆ ಅರೀಫ್ ಉಲ್ಲಾರವರಿಗೆ ದಾವ ಸ್ವತ್ತಿನ ಹಕ್ಕು ಪತ್ರವನ್ನು ಜಿಲ್ಲಾಧಿಕಾರಿರವರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಿಃ 02.03.1989 ರ ರಶೀದಿಯನ್ನು ರೂ. 400/– ಗಳಿಗೆ ಕಂದಾಯ ಕಟ್ಟಿದ್ದೇನೆ ಎಂದರೆ ಸರಿ. ಸುಮಾರು 4 ವರ್ಷ 3 ತಿಂಗಳ ವರೆಗೆ ನಾನು ಹರಾಜಿನ ಕಂತನ್ನು ಕಟ್ಟಿಕೊಂಡು ಬಂದಿದ್ದೇನೆ. ಯಾವ ಉದ್ದೇಶಕ್ಕೆ ರೂ. 3,480/– ರಲ್ಲಿ ರೂ.480/–ಹಣನ್ನು ಹೆಚ್ಚುವರಿಯಾಗಿ ಕಟ್ಟಿದ್ದೇನೆ ಎಂದು ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು ನನಗೆ ಸೇಲ್ ಸರ್ಟಿಫಿಕೇಟ್ ನೀಡಲಾಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಸೇಲ್ ಸರ್ಟಿಫಿಕೇಟ್ ನಲ್ಲಿ ಒಕ್ಕಣಿಕೆಯನ್ನು ನಾನು ಓದಿ ತಿಳಿದುಕೊಂಡೆ. ನಿಪಿ–1 ರಲ್ಲಿರುವ ಷರತ್ತುಗಳು ನನಗೆ ಗೊತ್ತಿತ್ತು, ಸಾಕ್ಷಿಯು ಮುಂದುವರೆದು 1982 ರ ವರೆಗೆ ಹರಾಜಿನ ಮೊತ್ತವನ್ನು ಕಟ್ಟಿಸಿಕೊಂಡು ನಂತರ ನನಗೆ ಸೇಲ್ ಸರ್ಟಿಫಿಕೇಟ್ ನ್ನು ನೀಡಿದರು ಎಂದು ನುಡಿಯುತ್ತಾರೆ. ನಾನು ನನ್ನ ವಾದ ಪತ್ರದಲ್ಲಿ ಸೇಲ್ ಸರ್ಟಿಫಿಕೇಟ್ ತೆಗೆದುಕೊಂಡ ದಿನದಿಂದ ನಾನೇ ಸ್ವಾಧೀನದಲ್ಲಿದ್ದೇನೆ ಎಂದು ಬರೆಸಿದ್ದೇನೆ ಎಂದರೆ ಸರಿ. 2019 ರ ವರೆಗೂ ದಾವ ಸ್ವತ್ತು ಮತ್ತೊಬ್ಬರ ಹೆಸರಿಗೆ ನಮೂದಾಗಿದೆ ಎಂದು ನನಗೆ ಗೊತ್ತಿಲ್ಲ. ದಾವ ಸ್ವತ್ತಿನ ಪೂರ್ವಕ್ಕೆ–ನಿವೇಶನ ಸಂಖ್ಯೆಃ 277, ಪಶ್ಚಿಮಕ್ಕೆ–ರಸ್ತೆ, ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ– ನಿವೇಶನ ಸಂಖ್ಯೆಃ 275 ಇದೆ.

ದಾವ ಸ್ವತ್ತಿನ ದಕ್ಷಿಣಕ್ಕೆ ಇರುವ ನಿವೇಶನ ಸಂಖ್ಯೆ 277 ಯಾರಿಗೆ ಮಂಜೂರಾಗಿದೆ ಎಂದು ನನಗೆ ಗೊತ್ತಿಲ್ಲ. ದಾವ ಸ್ವತ್ತಿನ ನಿವೇಶನವನ್ನು ನನಗೆ ಮಂಜೂರು ಮಾಡುವಂತೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದೆ. ಸದರಿ ಅರ್ಜಿಯನ್ನು 2000 ರ ಇಸವಿಯಲ್ಲಿ ಸಲ್ಲಿಸಿರಬಹುದು. ನಿಪಿ–20 ರಲ್ಲಿ ನಾನು ಲೋಕಾಯುಕ್ತಕ್ಕೆ ದೂರು ಕೊಟ್ಟ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ. ಅದರಂತೆ 3ನೇ ಪ್ರತಿವಾದಿ ಕ್ರಮವಹಿಸುವಂತೆ ಸೂಚನೆಯಾಗಿತ್ತು ಎಂದರೆ ಸರಿ. ನಿಪಿ–20 ರಲ್ಲಿ ನನಗೆ ಬದಲಿ ನಿವೇಶನ ನೀಡುವಂತೆ ತೀರ್ಮಾನಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಯಾವುದೆ ನಿವೇಶನ ನೀಡಿಲ್ಲ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿ ವಿರುದ್ಧ 2004 ರಲ್ಲಿ ಬದಲಿ ನಿವೇಶನ ಕೊಡುವಂತೆ ದಾವೆ ಹೂಡಲು ತೊಂದರೆ ಇರಲಿಲ್ಲ. ದಾವ ಸ್ವತ್ತನ್ನು 3ನೇ ಪ್ರತಿವಾದಿ ನಿಪಿ–1 ನ್ನು ನೀಡಿದ ನಂತರ 36 ವರ್ಷ 1 ತಿಂಗಳ ವರೆಗೆ ಅದರ ಸ್ವಾಧೀನ ಕೊಟ್ಟಿಲ್ಲ ಎಂದರೆ ಸರಿ.

ನನ್ನ ಹೆಸರಿಗೆ ಖಾತಾ ಮಾಡಿಸಿಕೊಡುವಂತೆ ಅರ್ಜಿ ಸಲ್ಲಿಸಿದ್ದೆ, ಸದರಿ ಅರ್ಜಿಗಳು ನನ್ನ ಬಳಿ ಇಲ್ಲ. 3ನೇ ಪ್ರತಿವಾದಿ ನನ್ನ ಅರ್ಜಿಯ ಮೇಲೆ ಕ್ರಮ ತೆಗೆದುಕೊಂಡ ಬಗ್ಗೆ ನನಗೆ ತಿಳಿಸಿಲ್ಲ. ಈ ದಾವೆ ದಾಖಲಿಸಿದ ನಂತರ ಬೇರೆಯವರ ಹೆಸರಿನಲ್ಲಿ ದಾವ ಸ್ವತ್ತು ನಮೂದಾಗಿದೆ ಎಂದು ತಿಳಿಯಿತು. ದಾವ ಸ್ವತ್ತಿನಲ್ಲಿ ನಾನು ಇಂದಿಗೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತನ್ನು ಕಬಳಿಸುವ ಸಲುವಾಗಿ, ಸುಳ್ಳು ದಾಖಲೆಯನ್ನು ಸೃಷ್ಟಿಸಿ, ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ